International Journal of Kannada Research 2018; 4(4): 136-139

International Journal of Kannada Research
www.kannadajournal.com

ISSN: 2454–5813
IJKR 2018; 4(4): 136-139
© 2018 IJKR
www.kannadajournal.com
Received: 27-08-2018
Accepted: 28-09-2018

**ಸಂಜಯಕುಮಾರ .ಶಿ. ಹಾರೋಬಿಡಿ**[1]
ಸಂಶೋಧನಾರ್ಥಿ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ

**ಡಾ ಗಜಾನನ ನಾಯ**
ಸಹಾಯಕ ಪ್ರಾಧ್ಯಾಪಕರು, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ

**Correspondence**
**ಸಂಜಯಕುಮಾರ .ಶಿ. ಹಾರೋಬಿಡಿ**[1]
ಸಂಶೋಧನಾರ್ಥಿ, ರಾಣಿ ಚನ್ನಮ್ಮ ವಿಶ್ವವಿದ್ಯಾಲಯ, ಬೆಳಗಾವಿ

# ಜಯಂತ ಕಾಯ್ಕಿಣಿಯವರ ಬಣ್ಣದ ಕಾಲು ಕಥಾ ಸಂಕಲನದ ಕಥನ ಕ್ರಮ

**ಸಂಜಯಕುಮಾರ .ಶಿ. ಹಾರೋಬಿಡಿ**[1]**, ಡಾ ಗಜಾನನ ನಾಯ**

ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಜಯಂತ ಕಾಯ್ಕಿಣಿ ಕವಿಯಾಗಿ, ಕಥೆಗಾರರಾಗಿ, ಸಿನಿಮಾ ಕ್ಷೇತ್ರದಲ್ಲಿ ನಿರ್ದೇಶಕರಾಗಿ ಪ್ರಸಿದ್ಧಿಯನ್ನು ಪಡೆದವರು. ಇವರು ಸಾಹಿತ್ಯ ಲೋಕಕ್ಕೆ ತಮ್ಮ ಸೃಜನಶೀಲ ಬರಹಗಳನ್ನು ನೀಡಿ ಸಹಸ್ರಾರು ಓದುಗ ವರ್ಗವನ್ನು ಹೊಂದಿದವರಾಗಿದ್ದಾರೆ. ಜಾಗತೀಕ ಅನೇಕ ಕಥೆಗಾರರು ಕಥೆಗಳನ್ನು ಬರೆದು ಸಾಹಿತ್ಯವನ್ನು ಶ್ರೀಮಂತಗೊಳಿಸಿದ್ದಾರೆ. ಸಾವಿರಾರು ವರ್ಷಗಳ ಇತಿಹಾಸವನ್ನು ಹೊಂದಿರುವ ಕನ್ನಡ ಕಥಾ ಪರಂಪರೆ ಕೆಲವು ದಶಗಳ ಹಿಂದೆ ಬಹು ದೊಡ್ಡ ಬದಲಾವಣೆಗಳೊಂದಿಗೆ ಬೆಳೆದು ಬಂದಿರುವುದನ್ನು ಕಾಣುತ್ತೇವೆ. ವಸಾಹತುಶಾಹಿ ಆಡಳಿತದ ಪ್ರಭಾವ ಕೂಡ ಪ್ರಮೂಖವಾಗಿದೆ. ಒಮ್ಮೆಲೆ ಹೊಸತನ ಕಾಣದೇ ಹಳೆಯ ಮಾದರಿಯೇ ಹೊಸ ರೂಪವನ್ನು ಪಡೆದುಕೊಂಡು ಬೆಳೆಯಲು ಪ್ರಾರಂಭಿಸಿತು. ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಏಳರಿಂದ ಎಂಟನೆಯ ಶತಮಾನದಲ್ಲಿ ಪ್ರಾರಂಭಗೊಂಡು ಸುಮಾರು 16ನೆ ಶತಮಾನದಲ್ಲಿ 'ಶಾರ್ಟ ಸ್ಟೋರಿ' ಎಂಬ ಸಾಹಿತ್ಯ ಪ್ರಕಾರ ಬೆಳೆದು ಬಂದಿರುವುದನ್ನು ಡಾ.ಜಿ.ಪಿ.ಬಸವರಾಜು ಗುರುತಿಸಿರುವುದನ್ನು ಕಾಣಬಹುದು.

ಆಂಗ್ಲ ಭಾಷೆಯು ಕೇವಲ ಆಡಳಿತಾತ್ಮಕ ವ್ಯವಹಾರಗಳಲ್ಲಿ ಪ್ರಭಾವವನ್ನು ಬೀರದೆ ಸಾಹಿತ್ಯದ ಮೇಲೂ ಪ್ರಭಾವವನ್ನು ಬೀರಿತು. 'ಶಾರ್ಟ ಸ್ಟೋರಿ' ಎಂಬ ಆಂಗ್ಲ ಪದಕ್ಕೆ 'ಸಣ್ಣ ಕಥೆ' ಎಂಬ ಪದವನ್ನು ಪರ್ಯಾಯವಾಗಿ ಬಳಸಿಕೊಳ್ಳಲಾಗುತ್ತಿದೆ. ಸಾಹಿತ್ತಿಕ ಭಾಷೆಯಲ್ಲಿ ಕಥೆ, ಸಣ್ಣ ಕಥೆ, ನೀಳ್ಗತೆ ಎಂಬ ಅನೇಕ ಸಮನಾರ್ಥಕ ಪದಗಳು ರೂಢಿಯಲ್ಲಿವೆ. ದೇಶಿಯ ಸಾಹಿತ್ಯವನ್ನು ಆಂಗ್ಲರ ಕಥೆಯ ಚೌಕಟ್ಟಿನೊಳಗೆ ಅಧ್ಯಯನಿಸುವ ಪರಿಪಾಟ ಬೆಳೆದು ಬಂದದ್ದು 18ನೆ ಶತಮಾನದ ಉತ್ತರಾರ್ಧದಲ್ಲಿ. ಪಂಜೆ ಮಂಗೇಶರಾಯರಿಂದ ಪ್ರಾರಂಭವಾಗಿ ಪ್ರಸ್ತುತ ಸಂದರ್ಭದವರೆಗೆ. ನವೋದಯ ಕಾಲದ ಕವಿಗಳಲ್ಲಿ ಒಬ್ಬರಾದ ಮಾಸ್ತಿ ವೆಂಕಟೇಶ ಅಯ್ಯಂಗಾರ ಅವರನ್ನು 'ಸಣ್ಣ ಕಥೆಯ ಜನಕ'ಎಂದು ಕರೆಯಿಸಿಕೊಳ್ಳುವಷ್ಟು ಬೆಳೆದು ನಿಂತಿದೆ. ಕಥಾ ಸಾಹಿತ್ಯ ಹಲವಾರು ಹೊಸ ಮಾದರಿಗಳನ್ನು ಬಳಸಿಕೊಂಡು ಓದುಗರನ್ನು ತನ್ನತ್ತ ಸೆಳೆಯುತ್ತಿದೆ.

ಕಥಾ ಪರಂಪರೆಯು ಹಲವು ಕಾಲಘಟ್ಟಗಳಲ್ಲಿ ಬೆಳೆದು ಬಂದಿದೆ. ಹೊಸ ಹೊಸ ಬರಹಗಾರರನ್ನು ಸಾಹಿತ್ಯ ಕ್ಷೇತ್ರದತ್ತ ಆಸಕ್ತಿ ಮೂಡುವಂತೆ ಮಾಡಿದೆ. ಬಂಡಾಯ ಸಾಹಿತ್ಯ ಕಾಲಘಟ್ಟದ ನಂತರದ ಹೊಸ ತಲೆಮಾರಿನ ಕಥೆಗಾರರ ಸಾಲಿನಲ್ಲಿ ಗುರುತಿಸಿಕೊಂಡಿರುವ ಜಯಂತ ಕಾಯ್ಕಿಣಿಯವರ ಕಥಾ ಸಾಹಿತ್ಯದ ಕುರಿತು ಅಧ್ಯಯನಿಸುವ ಪ್ರಯತ್ನ ಮಾಡಿದ್ದೇನೆ.

### ಜಯಂತ ಕಾಯ್ಕಿಣಿಯವರ 'ಬಣ್ಣದ ಕಾಲು' ಕಥಾ ಸಂಕಲನ

ಜಯಂತ ಕಾಯ್ಕಿಣಿಯವರ''ಬಣ್ಣದ ಕಾಲು''ಕಥಾ ಸಂಕಲನವು 1999ರಲ್ಲಿ ಪ್ರಕಟಗೊಂಡಿದೆ. ಒಟ್ಟು 13 ಕಥೆಗಳನ್ನು ಒಳಗೊಂಡಿದೆ. ಈ ಕಥೆಗಳಲ್ಲಿ ವೈವಿಧ್ಯತೆಯಿಂದ ಕೂಡಿದ ಸೃಜನಶೀಲ ಬರವಣಿಗೆಯನ್ನು ಕಾಣಬಹುದು. ಇವರ ಬರವಣಿಗೆಯ ಕುರಿತು ಶ್ರೀಯುತ ಎಂ.ಎಸ್. ಶ್ರೀರಾಮರು '' ಜಯಂತಣ ಕಥೆಗಳು, ಕವಿತೆಗಳು, ಪ್ರಬಂಧಗಳು ನಿರಂತರವಾದ ಯಾವುದೋ ಯಾನದ ಚಿತ್ರದಂತೆ ಕಾಣುತ್ತವೆ. ಬಹುಶ: ಅದಕ್ಕೆ ಅವನ ಕಥೆಗಳು, ಕಥೆಗಿಂತ ಹೆಚ್ಚಾಗಿ ಪದಗಳ ಮೂಲಕ ಚಲಿಸುವ ಚಿತ್ರಗಳಾಗಿವೆ'' ಎಂದು ಅಭಿಪ್ರಾಯ ವ್ಯಕ್ತಪಡಿಸುತ್ತಾರೆ(ಜಯಂತ ಕಾಯ್ಕಿಣಿ, ಬಣ್ಣದ ಕಾಲು, ಕಥಾ ಸಂಕಲನ, ಮುನ್ನುಡಿ ಪುಟ, ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರ, 2004) ಕಾಯ್ಕಿಣಿಯವರ ಕಥೆಗಳನ್ನು ಅಧ್ಯಯನಕ್ಕೆ ಒಳಪಡಿಸಿದಂತೆ ಈ ಎಲ್ಲ ಅನುಭವಗಳು ಓದುಗರಲ್ಲಿ ಉಂಟಾಗುತ್ತವೆ.

ಈ ಕಥೆಗಾರರ ಹೆಸರು ಹೆಚ್ಚು ಗುರುತಿಸಿಕೊಂಡದ್ದು ಸಿನಿಮಾ ಲೋಕದಲ್ಲಿ. ಜೊತೆಗೆ ಸಾಹಿತ್ಯ ಲೋಕದಲ್ಲೂ ಕೂಡ ಕಥೆ, ಪ್ರಬಂಧಗಳ ಮೂಲಕ ಹೆಚ್ಚು ಓದುಗರನ್ನು ಸೃಷ್ಟಿಸಿಕೊಂಡಿದ್ದಾರೆ. ಈ ಎರಡೂ ಕ್ಷೇತ್ರಗಳಲ್ಲಿ ಗುರುತಿಸಿಕೊಂಡಿರುವರು. ಶ್ರೀಯುತರು ಲವಲವಿಕೆ, ಸ್ನೇಹ ಭಾವ ಜೀವಿ. ಹಸನ್ಮುಖಿಗಳಾಗಿದ್ದು ಸಿನಿಮಾ ಮತ್ತು ಸಾಹಿತ್ಯ ಕ್ಷೇತ್ರಗಳಲ್ಲಿ ತಮ್ಮನ್ನು ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ.

ಒಂದು ಕಡೆ ಕವಿಯ ಮನಸ್ಸು ಮತ್ತೊಂದು ಕಡೆ ಸೃಜನಶೀಲ ಬರವಣಿಗೆಯ ಕಡೆಗಿನ ಒಲವು ಏಕ ಕಾಲಕ್ಕೆ ಮೈಗೂಡಿಸಿಕೊಂಡವರು. ಇವರ ಕಥೆಗಳಲ್ಲಿ ದೀರ್ಘಕಾಲದ ಅನುಭವಗಳು, ಅನೇಕ ಘಟನೆಗಳ ಕುರಿತಾಗಿ ವಿಶಾಲವಾದ ವಿಷಯ ವ್ಯಾಪ್ತಿಯನ್ನು ಪಡೆದುಕೊಂಡಿರುತ್ತವೆ. ಒಬ್ಬ ಕವಿಯ ಮನಸ್ಸಿನೊಳಗೆ ಬೇರೊಬ್ಬ ಸಹೃದಯಿ ಸೃಜನಶೀಲ ಬರಹಗಾರನಿರುತ್ತಾನೆ ಎಂಬುದಕ್ಕೆ ಇವರೂ ಒಬ್ಬ ನಿದರ್ಶನ ವ್ಯಕ್ತಿ ಎಂದರೆ ಅತಿಶಯೋಕ್ತಿಯಾಗಲಾರದು. ಈವರೆಗೆ ಅನೇಕ ಕಥಾ ಸಂಕಲನಗಳನ್ನು ಹೊರತಂದಿದ್ದಾರೆ.

ಸಿನಿಮಾ ಕ್ಷೇತ್ರದಲ್ಲಿ ಹೆಚ್ಚು ಗುರುತಿಸಿಕೊಂಡ ಈ ಲೇಖಕರ ಸಾಹಿತ್ಯ ಕ್ಷೇತ್ರದ ಕಡೆಗಿನ ಅದರಲ್ಲೂ ಕಥೆಗಳ ಕಡೆಗಿನ ಒಲವು ಗಮನಾರ್ಹವಾದದ್ದು. ಒಬ್ಬ ಕವಿ ಏಕ ಕಾಲದಲ್ಲಿ ಕಥೆಗಾರರಾಗಿ, ಪ್ರಬಂಧಕಾರರಾಗಿ ಸಂಗೀತಗಾರರಾಗಿ ಹೊರಹೊಮ್ಮಲು ಸಾಧ್ಯ ಎಂಬುದಕ್ಕೆ ಕಾಯ್ಕಿಣಿ ನಮ್ಮೆದುರಿಗಿದ್ದಾರೆ. ಇವರ ಸೃಜನಶೀಲ ಬರವಣಿಗೆಗೆ ಓದುಗರಿಂದ ಉತ್ತಮ ಪ್ರತಿಕ್ರಿಯೆ ಬಂದಿದೆ. 'ಬಣ್ಣದ ಕಾಲು' ಕಥಾ ಸಂಕಲನದಲ್ಲಿ ನಿರಂತರತೆ ಎಂಬುದು ಓದುಗರನ್ನು ತನ್ನತ್ತ ಸೆಳೆಯುತ್ತದೆ. ಒಂದೊಂದು ಕಥೆಯೂ ವಿಭಿನ್ನ ದೃಷ್ಟಿಕೋನವನ್ನು ಇಟ್ಟುಕೊಂಡು ರಚನೆಯಾಗಿರುವಂತವುಗಳು. ವಸ್ತು ವಿನ್ಯಾಸ ಮತ್ತು ಕಥನ ನಿರೂಪಣೆ ದೃಷ್ಟಿಯಿಂದ ಕಥೆಗಳು ವೈವಿಧ್ಯತೆಯಿಂದ ಕೂಡಿವೆ. ಪ್ರಸ್ತುತ ಕಾಲದ ವಸ್ತು ವಿಷಯಗಳೆ ಕಥೆಗೆ ಆಕರವಾಗಿದ್ದು ಒಂದೊಂದು ಕಥೆ ಒಂದೊಂದು ರೀತಿಯ ನೈತಿಕತೆಯನ್ನು, ಮಾನವೀಯತೆಯನ್ನು ಬೋಧಿಸುವಂತಿವೆ. ಈ ಲೇಖನದಲ್ಲಿ ಮೊದಲ ಭಾಗದ 6 ಕಥೆಗಳ ಕುರಿತು ವಸ್ತು ವಿನ್ಯಾಸ ಮತ್ತು ಕಥನ ನಿರೂಪಣೆಯ ದೃಷ್ಟಿಯಿಂದ ಈ ಪ್ರಬಂಧದಲ್ಲಿ ಅಧ್ಯಯನಕ್ಕೆ ಒಳಪಡಿಸಿದ್ದೇನೆ.

**ಬಣ್ಣದ ಕಾಲು ಕಥಾ ಸಂಕಲನದ ವಸ್ತು ವಿನ್ಯಾಸ, ಕಥನ ನಿರೂಪಣೆ**

ಒಂದು ಕಥೆ ರಚನೆಯಾಗಬೇಕಾದರೆ ಅಲ್ಲಿ ಕಥಾ ವಸ್ತು ಇರಬೇಕಾಗುತ್ತದೆ. ಆ ವಸ್ತುವೇ ಕಥೆಯ ಒಳ ಹೂರಣ. ವಸ್ತು ಪ್ರದಾನವಾದ ಕಥೆಗಳು ಹೆಚ್ಚು ಓದುಗರನ್ನು ಆಕರ್ಷಿಸುತ್ತವೆ ಎಂಬುದನ್ನು ವಿದ್ವಾಂಸರು ಒಪ್ಪಿದ್ದಾರೆ. ಹಾಗಂತ ವಸ್ತುವೇ ಪ್ರದಾನವಲ್ಲ. ಅದಕ್ಕೆ ತಕ್ಕಂತೆ ಪಾತ್ರಗಳು ಸನ್ನಿವೇಶಗಳು ನಿರೂಪಣೆಯ ತಂತ್ರಗಾರಿಕೆ ಪೂರಕವಾಗಿ ಹೊಂದಿಸಲ್ಪಟ್ಟಿರಬೇಕು. ಆಗ ಆ ವಸ್ತು ಕಥೆಗೆ ತಕ್ಕಂತೆ ಒಪ್ಪಿತವಾಗುತ್ತದೆ. ಈ ಕಥಾ ವಸ್ತುವನ್ನು ಬಳಸಿಕೊಳ್ಳುವ ಸಾಮರ್ಥ್ಯ ಬರಹಗಾರನನ್ನು ಅವಲಂಬಿಸಿರುತ್ತದೆ. ಸಾಮಾನ್ಯ ವಸ್ತುವಿರಲಿ, ಅದ್ಭುತ ವಸ್ತುವಿರಲಿ ಅದನ್ನು ಹೇಗೆ ಬಳಸಿಕೊಳ್ಳಬೇಕು ಎಂಬುದನ್ನು ಕಥೆಗಾರ ನಿರ್ಧರಿಸುತ್ತಾನೆ.

''ಕಥೆ ಮತ್ತು ವಸ್ತು'ಎನ್ನುವ ಪದಗಳನ್ನು ನಾವು ಸಾಮಾನ್ಯವಾಗಿ ಒಂದೇ ಅರ್ಥವುಳ್ಳ ಎರಡು ಪದಗಳೆಂಬ ಭಾವನೆಯಿಂದ ಬಳಸಿದರೂ ಅವುಗಳಿಗೆ ಇರುವ ಅರ್ಥ ವ್ಯತ್ಯಾಸವನ್ನು ಗಮನಿಸಬೇಕು. ಒಂದು ಕೃತಿಯಲ್ಲಿ ಕಥೆ ಇರಬಹುದು ಆದರೆ ವಸ್ತು ಇಲ್ಲದಿರಬಹುದು. ಕಥೆ ಎಂದರೆ ಕೆಲವು ಘಟನೆಗಳನ್ನು ಅವು ನಡೆದ ಕಾಲಕ್ಕನುಗುಣವಾಗಿ ಸೇರಿಸಿದ ಸರಪಳಿ. ವಸ್ತು ಘಟನೆಗಳನ್ನು ಒಳಗೊಳ್ಳುವುದು ಮಾತ್ರವಲ್ಲದೆ ಅವುಗಳಿಗೆ ಕಾಲದ ಕ್ರಮವಲ್ಲದೆ ಬೇರೊಂದು ಆಂತರಿಕ ಸಂಭಂದವನ್ನು ಕಲ್ಪಿಸುತ್ತದೆ.'' ಎಂದು ವಿಲಿಯಂ ಹೆನ್ರಿ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. ಇವರ ವ್ಯಾಖ್ಯಾನದಂತೆ ಒಂದು ಕೃತಿಯಲ್ಲಿ ಕಥೆ ಮತ್ತು ವಸ್ತುಗಳು ಎರಡೂ ಇರುತ್ತವೆ. ಆದರೆ ವಸ್ತುವಿಲ್ಲದೆ ಕಥೆ ನಿರೂಪಿಸಬಹುದು, ಯಾವುದೋ ಘಟನೆ ಸಂಭವಿಸಿದಾಗ ಅದರ ಕುರಿತು ಕಥೆ ರಚಿಸಬಹುದು. ಇಲ್ಲಿ ಘಟನೆ ಪ್ರಧಾನವಾಗಿರುತ್ತದೆ. ಈ ಘಟನೆಗೆ ಪೂರಕವಾಗಿ ವಿಷಯವನ್ನು ವಿಸ್ತರಿಸಿ ಹೇಳುವಾಗ ವಸ್ತುವಿನ ಅವಶ್ಯಕತೆ ಇರಲೇಬೇಕಾಗುತ್ತದೆ.

ವಸ್ತುವಿಗೆ ತಕ್ಕಂತೆ ಅನುಭವ, ಘಟನೆಗಳನ್ನು; ಘಟನೆಗಳಿಗೆ ಪೂರಕವಾಗಿ ವಸ್ತುವನ್ನು ಸಮರ್ಪಕವಾಗಿ ಬಳಸಿಕೊಂಡಾಗ ಒಂದು ಕಥೆ ರೂಪಗೊಳ್ಳಲು ಸಾಧ್ಯ ಎಂಬುದನ್ನು ಮರೆಯುವ ಹಾಗಿಲ್ಲ. ಒಂದಕ್ಕೊಂದು ಪೂರಕವಾಗಿಯೂ, ಪೋಷಕವಾಗಿಯೂ ಬಳಸಿಕೊಂಡಾಗ ಒಂದು ಸಿದ್ದ ರೂಪದ ಕಥೆ ನಿರ್ಮಾಣವಾಗುತ್ತದೆ. ಈ ಎಲ್ಲ ರೀತಿಯ ಮಾದರಿಗಳನ್ನು ಗಮನದಲ್ಲಿಟ್ಟುಕೊಂಡು ಜಯಂತ ಕಾಯ್ಕಿಣಿಯವರ 'ಬಣ್ಣದ ಕಾಲು' ಕಥಾ ಸಂಕಲನದ ಮೇಲೆ ಈ ಲೇಖನ ಸಿದ್ದಪಡಿಸಿದ್ದೇನೆ.

**ಬಣ್ಣದ ಕಾಲು :** ಮೊದಲನೆಯ ಭಾಗದಲ್ಲಿ ಬರುವ ಮೊದಲನೆಯ ಕಥೆ ಹೆಸರಿಗೆ ತಕ್ಕಂತೆ ಕಥಾ ಸಾರವನ್ನು ಹೊಂದಿದೆ. ಒಂದು ಕುಟುಂಬದಲ್ಲಿ ನಡೆಯುವ ಮಗನ ಪೋಲಿತನವನ್ನು ಓದುಗರಿಗೆ ನಡೆಯುತ್ತಿರುವ ಹಾಗೆ ಕಟ್ಟಿಕೊಟ್ಟಿದ್ದಾರೆ. ಮಾನಸಿಕವಾಗಿ ಅಪ್ರಬುದ್ಧನಂತೆ ವರ್ತಿಸುವ ಚಂದುವಿನ ಕಿತಾಪತಿಗಳಿಂದ ಇಡಿ ಕೇರಿಯ ಜನ ಬೇಸತ್ತಿದ್ದಾರೆ. ಕೇರಿ ಎಂದರೆ ವಠಾರ ಎಂಬ ಪದಕ್ಕೆ ಪರ್ಯಾಯವಾಗಿ ಬಳಸಿಕೊಂಡಿದ್ದಾರೆ. ಶಾಲೆಯ ಗುರುಗಳಿಂದ ಹಿಡಿದು ಪೋಲಿಸಪ್ಪನವರೆಗೆ ಬೆದರಿಸಿದರೂ ಕೇಳದ ಚಂದು ತನಗೆ ಸಂಬಂದವಿಲ್ಲದಂತೆ ಕಿತಾಪತಿಯಲ್ಲಿ ತೊಡಗಿದ್ದಾನೆ. ಸಣ್ಣ ಕಿಟಲೆಯಿಂದ ಹಿಡಿದು ಪ್ರಾಣ ಹಾನಿ ಉಂಟಾಗುವವರೆಗಿನ ಅ ಸಾಮಾನ್ಯ ವರ್ತನೆಗಳು ತಂದೆ ತಾಯಿಯನ್ನು ಆತಂಕಕ್ಕೆ ಗುರಿಪಡಿಸಿದ್ದವು. ದೊಡ್ಡವನಾದ ಮೇಲೆ ಸುಧಾರಿಸಬಹುದು ಎಂದು ಸಹಿಸಿಕೊಂಡು ಬಂದಿದ್ದರು. ಗುಣವಾಗದಿದ್ದಾಗ ಮುಂಬೈನ 'ರಿಮ್ಯಾಂಡ್ ಹೋಮ್'ಗೆ ಸೇರಿಸುವ ನಿರ್ಧಾರ, ಒಲ್ಲದ ಮನಸ್ಸಿನಿಂದ ಮಾಡುತ್ತಾರೆ.

ಚಂದು ಮುಂಬೈಗೆ ಹೋಗುವ ಸುದ್ದಿಯನ್ನು ಮಂಗೇಶನಿಗೆ ತಿಳಿಸಲು ಹೋದಾಗ ತನಗೊಂದು ಬಣ್ಣದ ಕಾಲು ತಪ್ಪದೆ ತಾ ಎಂದು ಹೇಳಿದ್ದನು. ಅಂತೂ ಮಹಾನಗರಕ್ಕೆ ಹೋದಾಗ ಅಲ್ಲಿಯ ನಗರ ಚಿತ್ರಣ ವಿಚಿತ್ರವಾಗಿ ಕಾಣುತ್ತದೆ. ಅವಸರದ ಜೀವನ ಸಾಗಿಸುತ್ತಿರುವ ಜನಗಳು. ಮಾನವೀಯತೆಯನ್ನು ಮರೆತಿರುವ ಮನುಷ್ಯರು. ಸಹಾಯ ಕೇಳಿದರೆ ಮಾತನಾಡುವಷ್ಟು ವ್ಯವಧಾನವಿಲ್ಲದ ಚಿತ್ರಣ ನೋಡಿ ಮನಸ್ಸಿಗೆ ನೋವುಂಟಾಗುತ್ತದೆ. ಮುಂಬೈನ ಬೀದಿಯಲ್ಲಿ ನಡೆದು ಹೋಗುವಾಗ ಚಂದುನ ದೃಷ್ಟಿ ಬಣ್ಣದ ಕಾಲಿನ ಹುಡುಕಾಟದಲ್ಲಿಯೇ ಕೇಂದ್ರೀಕೃತವಾಗಿರುತ್ತದೆ. ಪುಂಡ ಈ ಹುಡುಗನ ಅಂತರಂಗದಲ್ಲಿ ಒಳ್ಳೆಯ ವ್ಯಕ್ತಿಯನ್ನು ಗುರುತಿಸದೆ ಎಲ್ಲರೂ ಅವನನ್ನು ತಿರಸ್ಕರಿಸಿದ್ದರು. ತನ್ನ ಅಂಗವಿಕಲ ಸ್ನೇಹಿತನಿಗೆ ಕೊಟ್ಟ ಮಾತನ್ನು ಉಳಿಸಿಕೊಳ್ಳಬೇಕೆಂಬ ಉತ್ಕಟ ಆಸೆ ಮನಸ್ಸಲ್ಲಿ ಉಳಿದೆ ಇತ್ತು.

ಮುಂಬೈನಲ್ಲಿ ಪರಿಚಿತವನಾಗಿದ್ದ ಕಾನ್ಕರ ಕಾಕಾನ ಸ್ವಾರ್ಥ ಸ್ನೇಹ ನರಸಿಂಹನಿಗೆ ನೋವನ್ನುಂಟು ಮಾಡುತ್ತದೆ. 'ರಿಮ್ಯಾಡ್ ಹೋಮ್'ನ ದುಸ್ಥಿತಿ ಕಂಡು ಮಗನನ್ನು ಅಲ್ಲಿ ಸೇರಿಸದೆ ಪುನ: ತನ್ನೊಡನೆ ಕರೆದುಕೊಂಡು ಹೋಗುವ ನಿರ್ಧಾರ ಮಾಡುತ್ತಾನೆ. ಮುಂಬೈನಲ್ಲಿ ನಡೆದ ಮೋಸ, ಬುಟಾಟಿಕೆ, ಕಳ್ಳತನವನ್ನು ಕಂಡ ಚಂದು ತನ್ನ ತಪ್ಪಿನ ಅರಿವಾಗಿ ಒಳ್ಳೆಯವನಾಗಬೇಕೆಂದು ಬಯಸುತ್ತಾನೆ. ಮಂಗೇಶನಿಗೆ ಬಣ್ಣದ ಕಾಲು ತೆಗೆದುಕೊಂಡು ಹೋಗಲೇಬೇಕೆಂದು ನಿರ್ಧರಿಸಿ ರಾತ್ರಿಯೆಲ್ಲ ಕನವರಿಸುತ್ತ ಮಲಗುತ್ತಾನೆ. ಮಗನಲ್ಲಿ ಕಂಡ ಬದಲಾವಣೆಗಳಿಂದ ಸಂತೋಷಗೊಂಡ ತಂದೆ ನರಸಿಂಹ ತನ್ನ ಮಗನನ್ನು ಅಪ್ಪಿಕೊಂಡು ನಿದ್ದಗೆ ಜಾರುತ್ತಾನೆ.

**ಚೌತಿ ಚಂದ್ರ :** ಈ ಕಥೆ ಮಾಯದ ಬದುಕಿಗೆ ಮರುಳಾಗಿ ಸರಕಾರಿ ನೌಕರಿಯಲ್ಲಿದ್ದ ಪಾಂಡು ತನ್ನ ಬದುಕನ್ನು ಹೇಗೆ ಅಂದ ಪತನಕ್ಕೆ ಸಿಲುಕಿಸುತ್ತಾನೆ ಎಂಬ ಕಥಾ ವಸ್ತುವನ್ನು ಒಳಗೊಂಡಿದೆ. ಪಾಂಡುವಿನ ಪಾತ್ರದ ಮೂಲಕ ಹೆಣ್ಣಿನ ಮಾಯೆಯ ಬೆನ್ನು ಹತ್ತಿದ ಮನುಷ್ಯನ ಪರಿಸ್ಥಿತಿ ಹೇಗೆ ಇಕ್ಕಟ್ಟಿನಲ್ಲಿ ಸಿಲುಕುತ್ತದೆ ಎಂಬುದನ್ನು ಚಿತ್ರಿಸಿದ್ದಾರೆ. ಕಥೆಯಲ್ಲಿ ಪ್ರಸ್ತಾಪಿಸಿದಂತೆ, ಗಣೇಶ ಚತುರ್ಥಿಯ ದಿನ ನಾಟಕವಾಡುವುದು ಪರಂಪರೆಯಿಂದ ನಡೆಸಿಕೊಂಡು ಬರಲಾಗಿರುತ್ತದೆ. ಪ್ರತಿ ವರ್ಷದಂತೆ ಪಾಂಡುವಿನ ಊರಲ್ಲಿ ನಾಟಕವಾಡುವುದು ನಿಶ್ಚಯವಾಗಿತ್ತು. ಪಾತ್ರದಾರಿಯಾಗಿ ಪಾಂಡು ಕೂಡಾ ಒಬ್ಬನಾಗಿದ್ದ. ಅದೇ ಕಾರಣಕ್ಕಾಗಿ ವಾರದ ಮುಂಚೆಯಿಂದ ತನ್ನ ಡಿಪೋ ಮ್ಯಾನೇಜರ್ ಸಾವಂತನನ್ನು ರಜೆ ಕೊಡುವಂತೆ ದುಂಬಾಲು ಬಿದ್ದಿದ್ದರೂ ರಜೆ ನೀಡಲಾಗುವುದಿಲ್ಲ ಎಂದು ಹೇಳಿದ್ದನು. ಇದರಿಂದ ಕೋಪಗೊಂಡ ಪಾಂಡು ತನ್ನ ಡ್ಯೂಟಿ ಮುಗಿಸಿ ಕತ್ತಲಾದ ಮೇಲೆ ತನ್ನ ಮೇಲಾಧಿಕಾರಿಗಳಿಗೆ ತಿಳಿಸದೆ 'ಡಬಲ್ ಡೆಕ್ಕರ'ಬಸ್ಸನ್ನು ತನ್ನ ಊರಿನ ಕಡೆಗೆ ತೆಗೆದುಕೊಂಡು ಹೋಗಿಬಿಡುತ್ತಾನೆ. ಊರು ತಲುಪುವದಷ್ಟೆ ಊರಿನವರೆಲ್ಲ ಬಸ್ ತುಂಬ ಹತ್ತಿ ಖುಷಿಯಿಂದ ನಲಿದಾಡಿದರು.

ಆತನ ಹೆಂಡತಿ ನಿತ್ಯ ಬದುಕುವುದಕ್ಕೂ ಸಂಘರ್ಷ ಎದುರಿಸುವ ಸ್ಥಿತಿ ನಿರ್ಮಾಣವಾಗಿರುತ್ತದೆ. ಅಪರೂಪಕ್ಕೆ ಮನೆಗೆ ಬರುವ ಪತಿರಾಯ. ಮನೆ ಮತ್ತು ಮಕ್ಕಳ ಜವಾಬ್ದಾರಿ ನಿಭಾಯಿಸುವುದು ಕಷ್ಟಕರವಾಗಿದೆ. ನಾಟಕದ ತಯಾರಿಗೋಸ್ಕರ ಬಂದಿದ್ದ ಪತಿರಾಯ 'ತಮಾಷಾ' ನಾಟಕ ಕಂಪನಿಯ ನಾಯಕಿ ಜಯೀಬಾಯಿಯ ಸಹವಾಸವನ್ನು ಮಾಡಿರುವುದನ್ನು ತಿಳಿದು ಪತಿಯನ್ನು ದಾರಿಗೆ ತರಲಾಗದೆ ಸೋಲನ್ನು ಅನುಭವಿಸುತ್ತಾಳೆ. ಮೈದುನನ ಕುಟುಂಬದ ಜೊತೆಗೆ ಬಾಳುವುದು ಅನಿವಾರ್ಯವಾಗುತ್ತದೆ. ಗಣೇಶನ ಹಬ್ಬದಂದು ಊರಿನವರೆಲ್ಲ ಸಂಭ್ರಮದಿಂದ ಗಣೇಶನನ್ನು ಪ್ರತಿಷ್ಠಾಪಿಸುವ ಕಾರ್ಯದಲ್ಲಿ ತೊಡಗಿದ್ದರು. ಜಯೀಬಾಯಿ ಪಾಂಡುನ ಜೊತೆಗೆ ಏಕಾಂತದಲ್ಲಿ 'ಡಬಲ್ ಡೆಕ್ಕರ್' ಬಸನಲ್ಲಿ ತಿರುಗಾಡುವ ಆಶೆ ವ್ಯಕ್ತಪಡಿಸುತ್ತಾಳೆ. ಜೊತೆಗೆ ಪಾಶಾನನ್ನು ಕರೆದುಕೊಂಡು ಹೊದವಳು ಮತ್ತೆ ಊರ ಕಡೆಗೆ ಹಿಂತಿರುಗಲೇ ಇಲ್ಲ. ಏಕಾಂತ ಸ್ಥಳದಲ್ಲಿ ಸೇರಿದ ಪಾಂಡು ಜಯೀಬಾಯಿ ಕೊನೆಗು ಒಂದಾಗಲು ಆಗುವುದಿಲ್ಲ. ಇತ್ತ ಪಾಶಾ ಅವರನ್ನು ಅಲ್ಲಿಯೇ ಬಿಟ್ಟು ಬಸ್ ಏಕಾಂಗಿಯಾಗಿ ಚಲಾಯಿಸಿಕೊಂಡು ಕಾಡಿನಲ್ಲಿ ಮರೆಯಾಗುತ್ತಾನೆ. ಕೊನೆಗೆ ಪಾಂಡು ಜಯೀಬಾಯಿಯನ್ನೂ ಉಳಿಸಿಕೊಳ್ಳಲಿಲ್ಲ, ತನ್ನ ಸರಕಾರಿ ನೌಕರಿಯನ್ನು ಉಳಿಸಿಕೊಳ್ಳಲಿಲ್ಲ.

**ಸೇವಂತಿ ಹೂವಿನ ಟ್ರಕ್ಕು :** ಸೇವಂತಿ ಹೂವಿನ ರೂಪಕವನ್ನು ಇಟ್ಟುಕೊಂಡು ಒಂದು ಅನಾಥ ಜೀವಿಯ ಸಂಕಟ, ಯಾತನೆಗಳನ್ನು ತೆರೆದಿಡುವ ಪ್ರಯತ್ನವನ್ನು ಈ ಕಥೆಯಲ್ಲಿ ಮಾಡಿದ್ದಾರೆ. ತನ್ನ ಸೌಂದರ್ಯದಿಂದ ಸಣ್ಣವರಿಂದ ಹಿಡಿದು ವೃದ್ಧರವರೆಗೆ ಪ್ರೀತಿ ಪಾತ್ರವಾಗಿರುವ ಹೂ ತಾನು ಅರಳಿದ ಸಮಯ ಮೀರುತ್ತಾ ಸಾಗಿದಂತೆ ಆ ಹೂವಿನ ಮೇಲಿನ ಪ್ರೀತಿ, ಆಕರ್ಷಣೆ ಕಡಿಮೆಯಾಗುತ್ತದೆ. ಮಹಾಜನ್ ಕುಟುಂಬದಲ್ಲಿ ಮನೆಗೆಲಸ ಮಾಡಲು ಸೇರಿದ್ದ ದುಗ್ಗಿಯ ಬದುಕು ಕೂಡಾ ತಿರಸ್ಕಾರಕ್ಕೆ ಒಳಗಾಗುತ್ತದೆ. ತಾನು ಶಕ್ತವಾಗಿರುವಷ್ಟು ದಿನ ಅವರ ಕುಟುಂಬದಲ್ಲಿ ಎಲ್ಲವನ್ನು ನಿಭಾಯಿಸುವ ಜೀವಿಯಾಗಿ ಬದುಕಿದ್ದ ಅವಳಿಗೆ ಕಷ್ಟದ ದಿನಗಳು ಪ್ರಾರಂಭಿಸುತ್ತವೆ.

ಬಾಳಿನುದ್ದಕ್ಕು ಮನೆಯ ಕಷ್ಟ ಸುಖದಲ್ಲಿ ಭಾಗಿಯಾಗಿದ್ದ ಅನಾಥ ದುಗ್ಗಿ ಮುಪ್ಪಿನ ವಯಸ್ಸಿನಲ್ಲಿ ಮನೆಯ ಒಡೆಯ ಮಹಾಜನ್, ಮಕ್ಕಳಾದ ರಶ್ಮಿ, ವರ್ಷಾ ಅವರಿಂದ ತಿರಸ್ಕಾರಕ್ಕೆ, ಅವಮಾನವನ್ನು ಅನುಭವಿಸುವ ಮೂಕ ಜೀವಿಯಾಗಿ ಬದುಕಬೇಕಾಗಿದೆ. ತಾನು ಹುಟ್ಟಿ ಊರನ್ನು ಬಿಟ್ಟು ಕೆಲಸವನ್ನು ಅರಸಿ ಬಂದಿದ್ದ ದುಗ್ಗಿಗೆ ಮಹಾಜನ್ ಎಂಬ ಕುಟುಂಬದಲ್ಲಿ ದಿನಕ್ಕೆರಡು ಊಟ ವರ್ಷಕ್ಕೆ ಒಂದು ಸೀರೆ ಬ್ಯಾಂಕನ ಖಾತೆಯಲ್ಲಿ ಒಂದಿಷ್ಟು ಹಣದ ಕರಾರಿನ ಮೇಲೆ ಕೆಲಸ ಸಿಗುತ್ತದೆ. ಮನೆಯ ಕೆಲಸದ ಜೊತೆಗೆ ಮಕ್ಕಳನ್ನು ನೋಡಿಕೊಳ್ಳುವುದು ಅವಳ ಜವಾಬ್ದಾರಿ. ತನಗೆ ಯಾರು ದಿಕ್ಕಿಲ್ಲ ಎಂಬ ಕಾರಣಕ್ಕೆ ತನ್ನ ಸರ್ವಸ್ವವನ್ನು ಆ ಮಕ್ಕಳ ಆರೈಕೆಯಲ್ಲಿ ಸವೆಸಿರುತ್ತಾಳೆ. ಹೆಣ್ಣುಮಕ್ಕಳು ಬೆಳೆದು ದೊಡ್ಡವರಾದಂತೆ ವಯಸ್ಸಾದ ದುಗ್ಗಿಯ ಮೇಲಿನ ಆಸಕ್ತಿ ಕಡಿಮೆಯಾಗುತ್ತದೆ.

ಅನಾರೋಗ್ಯದಿಂದ ಬಳಲುತ್ತಿರುವ ಆಕೆಯನ್ನು ಆಸ್ಪತ್ರೆಗೂ ತೋರಿಸದಷ್ಟು ನಿರಾಸಕ್ತಿ ತೊರುತ್ತಿದ್ದರು. ಆರೋಗ್ಯ ದಿನದಿಂದ ದಿನಕ್ಕೆ ಕ್ಷೀಣವಾಗುತ್ತ ಹೋಗುತ್ತದೆ. ಮಾತು ಮಾತಿಗೆ ಮಹಾಜನ್ ಮತ್ತು ಅವನ ಮಕ್ಕಳು ಕೋಪಿಸಿಕೊಳ್ಳತೊಡಗುತ್ತಾರೆ. ಈ ಮುದುಕಿಯಿಂದ ನಮ್ಮ ಮನೆಗೆ ಸ್ನೇಹಿತರು ಬರುತ್ತಿಲ್ಲ ಎಂದು ದೂರುತ್ತಾರೆ. ಶ್ರೀಮತಿ ಮಹಾಜನ್ ಇದೆಲ್ಲವನ್ನು ಕಂಡರು ಏನು ಮಾಡದಂತಾಗಿದ್ದಾಳೆ. ಮನೆಯವರೆಲ್ಲರ ಒತ್ತಡಕ್ಕೆ ಮನಿದು ದುಗ್ಗಿಗೆ ಅಸಹಜ ಸಾವಿಗಾಗಿ ವೈದ್ಯರಿಂದ ಮಾತ್ರೆಗಳನ್ನು ನೀಡಲು ಮುಂದಾಗುತ್ತಾರೆ. ಅನಾರೋಗ್ಯದಿಂದ ತಿಂಗಳುಗಟ್ಟಲೆ ಮಲಗಿದರೂ ವಿಚಾರಿಸದ ಮಹಾಜನ್ ಅಂದು ಕೊಟ್ಟ ಮಾತ್ರೆಗಳನ್ನು ನೋಡಿ ಸಂತೋಷಗೊಂಡಳು. ಆ ಕನಿಕರದ ಹಿಂದೆ ದುರಂತ ಯೋಚನೆ ಅಡಗಿದೆ ಎಂದು ಅವಳಿಗೆ ತಿಳಿದಿರಲಿಲ್ಲ. ಮುಪ್ಪಿನಲ್ಲಿ ತಾನು ಸಮಯ ಕಳೆಯುತ್ತಿದ್ದ ಕಿಟಕಿಯ ಹತ್ತಿರ ಹೋಗಿ ಹೊರ ನೋಡಿದಾಗ ಸುಮಾರು ದಿನಗಳಿಂದ ಅಲ್ಲಿ ನಿಲ್ಲಿಸಿದ್ದ ಸೇವಂತಿ ಹೂವಿನ ಲಾರಿಯಲ್ಲಿ ಯಾರೋ ಒಬ್ಬ ವ್ಯಕ್ತಿ ಹೂವನ್ನು ಹೊರ ಹಾಕುವ ಕ್ರಿಯೆಯಲ್ಲಿ ತೊಡಗಿರುತ್ತಾನೆ. ಈ ಚಿತ್ರಣ ಅನಾಥ ದುಗ್ಗಿಯ ಬಾಳಿನ ಕೊನೆಯ ಗಳಿಗೆಯನ್ನು ನೆನಪಿಸುವಂತಿದೆ.

**ಅಪರೂಪ :** ಬಲಹೀನತೆಯಿಂದ ಹುಟ್ಟಿದ ವರ್ಷಾಳ ನೋವಿನ ಬದುಕಿನ ಚಿತ್ರಣವನ್ನು ಕಟ್ಟಿಕೊಡುತ್ತದೆ. ಅಪೌಷ್ಟಿಕತೆಯಿಂದ ಶರೀರದ ಬಲಪಾಶ್ವ ಸೊಟ್ಟಗಿರುವ ಹೆಣ್ಣು ಮಗಳ ಮಾನಸಿಕ ತೊಳಲಾಟ ವಾಸ್ತವದ ರೀತಿಯಲ್ಲಿ ಈ ಕಥೆ ಮೂಡಿ ಬಂದಿದೆ. ಮನೆಯ ತುಂಬ ಮಕ್ಕಳಿದ್ದರೂ ತನ್ನ ತಂದೆಗೆ ಸಹಾಯ ಮಾಡಲು ವರ್ಷಾಳೆ ಬೇಕು. ಹೀಗಿದ್ದರೂ ಸ್ವತ: ತಂದೆಯಿಂದಲೆ ಅವಮಾನಕ್ಕೆ ಒಳಗಾದದ್ದುಂಟು. ಅಣ್ಣ ತಮ್ಮಂದಿರಿಂದ ಪ್ರತಿ ದಿನ ಅವಮಾನಕ್ಕೆ ಒಳಗಾಗುತ್ತಿದ್ದಳು. ಎಲ್ಲ ಅವಮಾನಗಳನ್ನು ಸಹಿಸಿಕೊಂಡಿದ್ದ ಇವಳಿಗೆ ತಂದೆ ಮದುವೆ ಮಾಡಲು ತಯಾರಿ ನಡೆಸುತ್ತಿರುವಾಗ ನೆರೆ ಹೊರೆಯವರು ವರನ ಪರಿಚಯ ಹೇಳುವದಕ್ಕಿಂತ ಮುಂಚೆ ವರ್ಷಾಳ ಅಂಗ ವೈಕಲ್ಯಕ್ಕೆ ಕುರುಡನೋ, ಕುಂಟನೋ, ಕಿವುಡನೋ, ಕಾಲಿಲ್ಲದವನೋ ನೋಡಬೇಕೆಂದು ಆಡಿಕೊಳ್ಳುತ್ತಿದ್ದರು.

ಮಗಳ ಪರಿ ಸ್ಥಿತಿಯನ್ನು ಕಂಡು ತಾಯಿಯ ಮನಸ್ಸು ಮರಗುತ್ತಿರುತ್ತದೆ. ತಂದೆಯ ಕಟ್ಟು ನಿಟ್ಟಿನ ನಿಯಮಗಳಿಂದ ಉಡುವ ಬಟ್ಟೆಗಳಿಂದ ಹಿಡಿದು ಎಲ್ಲದಕ್ಕೂ ವಿರೋದವಿರುತ್ತದೆ. ಹೇಗೊ ತನ್ನ ವಾರಿಗೆಯವರ ಜೊತೆಗೆ ಸೇರಿಕೊಂಡು ತನ್ನ ಜೀವನ ಶೈಲಿಯನ್ನು ಬದಲಾಯಿಸಿಕೊಂಡಿದ್ದಳು. ಎಲ್ಲರಂತೆ ತಾನು ಸಾಮಾನ್ಯರ ರೀತಿಯಲ್ಲಿ ಬದುಕಲು ಪ್ರಾರಂಭಿಸುತ್ತಾಳೆ. ತನ್ನ ಬಲಹೀನತೆಯಿಂದ ಮನೆಯವರ ಜೊತೆ ಪೋಟೊ ತೆಗೆಸಿಕೊಳ್ಳುವದಕ್ಕಾಗಲಿ, ಮನೆಗೆ ಹೊಸ ಕನ್ನಡಿ ತರುವುದಕ್ಕಾಗಲಿ ವಿರೋದಿಸುತ್ತಿದ್ದಳು. ತನ್ನನ್ನು ಹೊರ ಜಗತ್ತಿನೊಂದಿಗೆ ಗುರುತಿಸಿಕೊಂಡಾಗ ಜೀವನೋತ್ಸಾಹ ಇಮ್ಮಡಿಗೊಂಡಿತ್ತು. ತನ್ನ ತಮ್ಮ ಶಿಕ್ಷಣ ಪಡೆದು ನಿರುದ್ಯೋಗಿಯಾಗಿ ಮನೆಯಲ್ಲಿರುವುದನ್ನು ಕಂಡು ಮರುಗುತ್ತಿದ್ದಳು. ಸರ್ಕಾರದಿಂದ ಸಬ್ಸಿಡಿಯಲ್ಲಿ ಸಿಗುವ ಎಸ್.ಟಿ.ಡಿ. ಬೂತನ್ನು ತಮ್ಮನು ನಡೆಸಿಕೊಂಡು ಹೊಗುತ್ತಾನೆ ಎಂದು ತಿಳಿದು ಸ್ವತ: ತಾನೇ ತನ್ನ ಬಲಹೀನತೆಯ ಶರೀರದ ಪೋಟೊ ತೆಗೆಸಿಕೊಳ್ಳಲು ಸ್ಟುಡಿಯೊಗೆ ಹೊಗಿದ್ದವಳು.

ತಮ್ಮನಿಂದ ಮಾತು ಮಾತಿಗೆ ಹಂಗಿಸಿಕೊಳ್ಳುತ್ತಿದ್ದ ಅಕ್ಕಳಾದ ವರ್ಷಾ ತಮ್ಮನ ಮೇಲೆ ಯಾವತ್ತು ಮುನಿಸಿಕೊಂಡಿರಲಿಲ್ಲ.ಒಂದಲ್ಲ ಒಂದು ದಿನ ತಮ್ಮನಿಗೆ ತನ್ನ ತಪ್ಪಿನ ಅರಿವಾಗಿ ಸರಿ ದಾರಿಗೆ ಬರಬಹುದು ಎಂದು ನಂಬಿದ್ದಳು. ಅದಕ್ಕಾಗಿ ಆತನೊಂದಿಗೆ ಸಂತೋಷದಿಂದ ದಿನ ಕಳೆದಿದ್ದಳು. ತನ್ನಿಂದಲೆ ತಮ್ಮನಿಗೆ ಉದ್ಯೋಗ ಸಿಗುವಂತೆ ಮಾಡಿದವಳು. ಅವಳ ತ್ಯಾಗ ನಿಜವಾಗಲೂ ಸ್ಮರಣೀಯ. ಜೀವನದಲ್ಲಿ ನಿರುತ್ಸಾಹಿಯಾಗಿರದೆ ಉತ್ಸಾಹದಿಂದ ಬದುಕಿ ತೋರಿಸಿದ ವರ್ಷಾ ಇಂದಿಗೂ ಕೂಡಾ ಅಂಗವಿಕಲ ಮಕ್ಕಳಿಗೆ ಮಾದರಿಯಾಗಿದ್ದಾಳೆ.

**ಹೊಸ್ತಿಲು :** ಒಬ್ಬ ಬಡಪಾಯಿ ಗುಜರಿ ಅಂಗಡಿ ಮಾಲೀಕನ ಬದುಕಿನಲ್ಲಿ ಏನೆಲ್ಲ ಕಷ್ಟಗಳು ಎರಗುತ್ತವೆ ಎಂಬುದನ್ನು ಸೂಕ್ಷ್ಮ ಒಳನೋಟಗಳಿಂದ ಬರಹಕ್ಕಿಳಿಸಿದ್ದಾರೆ. ಮುಚ್ಚಿಮೀಯಾನ ಎಂದು ಪರಿಚಿತನಾಗಿದ್ದ ಇತ ತಾನು ಕೊಂಡು ತಂದಿದ್ದ ಹಳೆಯ ಗುಜುರಿ ಸಾಮಾನುಗಳ ಜೊತೆಗೆ ತಾನಿಟ್ಟಿಕೊಂಡಿದ್ದ ಭಾಂದವ್ಯವನ್ನು ಓದುಗರ ಮುಂದೆ ತೆರೆದಿಡುತ್ತಾರೆ. ಗುಜರಿ ಅಂಗಡಿಯಲ್ಲಿದ್ದ ಹಳೆ ಸಾಮಾನುಗಳೊಂದಿಗೆ ತನ್ನ ಹಳೆಯ ನೆನಪುಗಳನ್ನು ಮೆಲುಕು ಹಾಕಿಕೊಳ್ಳುತ್ತಿರುತ್ತಾನೆ. ಖರೀದಿಗೆ ತಂದಿದ್ದ ನವಿಲಿನ ಚಿತ್ತಾರವಿದ್ದ ಹಳೆಯ ಕನ್ನಡಿಯೊಳಗೆ ತನ್ನ ಹಳೆಯ ಗೆಳತಿಯ ಚಿತ್ರಣವನ್ನು ಕಂಡು ಸಂತೋಷಗೊಳ್ಳುತ್ತಿರುತ್ತಾನೆ. ಜೀವನದ ಸಂತಸದ ಕ್ಷಣಗಳನ್ನು ತನ್ನ ಭ್ರಮೆಯ ಮೂಲಕ ಪುನರ ಮನನ ಮಾಡಿಕೊಳ್ಳುವ ಮೂಲಕ ಜೀವನ ಸಾಗಿಸುತ್ತಿರುತ್ತಾನೆ.

ಮುಚ್ಚಿಮೀಯಾನ ಅಂಗಡಿಗೆ ವ್ಯವಹಾರದ ದೃಷ್ಟಿಯಿಂದ ಬರುತ್ತಿದ್ದರೆ ಹೊರತು ಏಕಾಂಗಿಯಂತಿದ್ದ ಅವನ ಸ್ನೇಹವನ್ನು ಯಾರು ಬಯಸುತ್ತರಲಿಲ್ಲ. ನಗರ ಜೀವನದ ಮಗ್ಗುಲನ್ನು ನಮ್ಮ ಕಣ್ಣೆದುರು ಒಂದು ಕ್ಷಣ ಜ್ಞಾಪಕಕ್ಕೆ ತಂದು ನಿಲ್ಲಿಸುತ್ತದೆ ಈ ಸನ್ನಿವೇಶ. ಚಹಾ ಮಾರುವ ಪೊಪಟ್ ಎಂಬ ಹುಡುಗ ಆತನೊಂದಿಗೆ ಸ್ನೇಹ ಬಯಸುತ್ತಾನೆ. ಆ ಅಂಗಡಿಯ ಗುಜುರಿ

ಸಾಮಾನುಗಳನ್ನು ಮಾರಿ ಉಪಜೀವನ ನಡೆಸುತ್ತಿರುವ ಮುಚ್ಚಿಮೀಯಾನ ಬಾಳಿನಲ್ಲಿ ಅನಿರೀಕ್ಷಿತವಾದ ತೊಂದರೆ ಬಂದೊದಗುತ್ತದೆ. ಮುನ್ಸಿ ಪಾಲಿಟಿ ಕಡೆಯವರು ಅತಿಕ್ರಮಣ ಮಾಡಿದ ಜಾಗದಲ್ಲಿದ್ದ ವಸ್ತುಗಳನ್ನು ಜಪ್ತಿ ಮಾಡುತ್ತ ಬಂದು ಇವನ ಅಂಗಡಿಯಲ್ಲಿ ಮಾರಾಟಕ್ಕಿಟ್ಟದ್ದ ಬಹಳಷ್ಟು ಸಾಮಾನುಗಳನ್ನು ತಮ್ಮ ವಾಹನದಲ್ಲಿ ತುಂಬಿಕೊಂಡು ಹೋಗಿರುತ್ತಾರೆ. ಅವುಗಳಲ್ಲಿ ತನ್ನ ಪ್ರೇಯಸಿಯ ನೆನಪು ಕಾಣುತ್ತಿದ್ದ ಕನ್ನಡಿಯೂ ಕೂಡಾ ಸೇರಿರುತ್ತದೆ. ಅದಕ್ಕಾಗಿ ತುಂಬ ಚಿಂತೆಯಲ್ಲಿದ್ದ ಮುಚ್ಚಿಮೀಯಾನ ಗೆಳೆಯ ಪೊಪೆಟ್ ಬುದ್ದಿವಂತಿಕೆಯಿಂದ ಆ ಕನ್ನಡಿಯನ್ನು ಊರಾಚೆಯಿರುವ ರೈಲು ಹಳಿಯ ಪಕ್ಕ ಜೋಪಾನವಾಗಿ ವಾಹನದಿಂದ ತೆಗೆದುಬಿಟ್ಟದ್ದನು.

ಮುಚ್ಚಿಮೀಯಾ ನೋಡಲು ಗಟ್ಟಿಮಟ್ಟಾಗಿದ್ದರೂ ಮಾನಸಿಕವಾಗಿ ತುಂಬ ಹತಾಶೆಗಳನ್ನು ಅನುಭವಿಸಿರುತ್ತಾನೆ. ಒಂದು ಮನೆಯ ಸೌಂದರ್ಯ ಸೋಬಗು ಎದ್ದು ಕಾಣುವುದು ಆ ಮನೆಯ ಪ್ರವೇಶ ದ್ವಾರದಲ್ಲಿರುವ ಹೊಚ್ಚಿಲಿನ ಮೂಲಕ. ಹಾಗೆನೆ ಈ ಕಥೆಯ ನಾಯಕನ ಕಳೆ ಇರುವುದು ನವಿಲಿನ ಚಿತ್ತಾರದಿಂದ ಕೂಡಿದ ಕನ್ನಡಿಯ ಒಳಗೆ. ಅದು ಅವನ ಬಾಳಿನಲ್ಲಿ ಬಂದಿದ್ದ ಅದೃಷ್ಟದ ವಸ್ತುವಾಗಿತ್ತು. ಉಪಕಾರ ಮಾಡಿದವರಿಗೆ ಆ ಋಣವನ್ನು ತಿರಿಸಿದ ಪೊಪೆಟ್ ಒಬ್ಬ ಆದರ್ಶ ವ್ಯಕ್ತಿಯಾಗಿ ಕಾಣುತ್ತಾನೆ.

**ದಿಟ್ಟಿ ಬೊಟ್ಟು :** ಮಹಾರಾಷ್ಟ್ರದ ಬಣ್ಣದ ಬದುಕಿನ ನೆರಳಲ್ಲಿ ಜೀವನ ಸಾಗಿಸುತ್ತಿರುವ, ಸಮಾಜದ ದೃಷ್ಟಿಕೋನದಲ್ಲಿ ಹೀನ ಕೃತ್ಯ ಎಂದು ಪರಿಗಣಿಸಿದ ವೇಶ್ಯಾ ವೃತ್ತಿಯನ್ನು ಉಪಜೀವನವನ್ನಾಗಿ ಮಾಡಿಕೊಂಡ ಸಾವಿರಾರು ಕುಟುಂಬಗಳ ಮಹಿಳೆಯರ ಮತ್ತು ಅವರ ಮಕ್ಕಳ ಬದುಕಿನ ವಾಸ್ತವದ ಚಿತ್ರಣವನ್ನು ಈ ಕಥೆಯ ಮೂಲಕ ತೊರಿಸಿ ಕೊಟ್ಟಿದ್ದಾರೆ. ಶಿಕ್ಷಣದಿಂದ ವಂಚಿತರಾದ ಮಕ್ಕಳಿಗೆ ಬದುಕುವ ಮಾರ್ಗವನ್ನು ಕಲಿಸಿಕೊಡುವ ಸಲುವಾಗಿ ಹೋರಾಟ ನಡೆಸಿದ ಕಾಕಾನ ಸಾಮಾಜೀಕ ಕಳಕಳಿ ಶ್ಲಾಘನೀಯ ಎನ್ನುವಷ್ಟು ನೈಜತೆಯಿಂದ ಕೂಡಿದೆ.

ರೆಡ್ ಏರಿಯಾ ಎಂದು ಪರಿಚಿತವಾಗಿದ್ದ ವಠಾರದ ಹೆಂಗಸರು ದಿನ ಬೆಳಗಾದರೆ ಕಾಯಿಲೆಯಿಂದ ನರಳಿ ಹಾಸಿಗೆ ಹಿಡಿಯುವರು. ಸಂಜೆ ಕತ್ತಲೆಯಾಗುತ್ತಿದ್ದಂತೆ ತರತರ ಬಣ್ಣಗಳಿಂದ ಶೃಂಗರಿಸಿಕೊಂಡು ಗಿರಾಕಿಗಳಿಗಾಗಿ ಬೀದಿ ಬೀದಿ ಅಲೆದು ಸಿಕ್ಕವರ ಜೊತೆಗೆ ಅನೈತಿಕ ಚಟಿವಟಿಕೆಗಳಲ್ಲಿ ತೊಡಗಿ ಪುಡಿಗಾಸು ಸಂಪಾದನೆ ಮಾಡಿ ಜೀವನ ನಡೆಸುವುದು. ಅನಾರೋಗ್ಯದಿಂದ ಬಳಲಿದರೂ ವೃತ್ತಿಯನ್ನು ಬಿಡದ ಕರ್ಮ. ಸಿಕ್ಕ ವ್ಯಾಪಾರಿ, ಗಿರಾಕಿಗಳಿಂದ ಗಳಿಸಲಿಲ್ಲವೆಂದರೆ ಉಪವಾಸ ಬೀಳುವ ಸ್ಥಿತಿ. ಇಂತಹ ಕಷ್ಟದ ಜೀವನದಲ್ಲಿ ಮಕ್ಕಳಿಗೆ ಶಿಕ್ಷಣ ಕೊಡಿಸಲು ಹೇಗೆ ಸಾಧ್ಯ. ಮಕ್ಕಳು ಕೂಡ ವೇಶ್ಯಾ ವೃತ್ತಿಯನ್ನೇ ಹಿಡಿಯಬೇಕಾದ ದುಸ್ಥಿತಿ.

ಕಾಕಾ ಎಂದರೆ ಖಡೂಸ್ ಕಾಕಾ(ಬಳಪ, ಚಾಕ್) ಎಂದು ಗುರುತಿಸಿಕೊಂಡ ಕಾಕಾ ಆ ಕೇರಿಯ ಮಕ್ಕಳಿಗೆ ಚಿತ್ರ ಕಲೆಯನ್ನು ಕಲಿಸುವಲ್ಲಿ ತಾನು ಅನುಭವಿಸುವ ಕಷ್ಟಗಳನ್ನು ಲೆಕ್ಕಿಸದೆ ಆ ಕಲೆಯ ಮಹತ್ವವನ್ನು ಮಕ್ಕಳಲ್ಲಿ ಮೂಡಿಸುತ್ತಾನೆ. ಶಾಲೆಯಿಂದ ಕಲಿತ ವಿದ್ಯೆ ಪುಸ್ತಕದ ಜ್ಞಾನ ಎಂದು ನಂಬಿದವನು. ಚಿತ್ರಕಲೆಯ ಕುರಿತು ಜ್ಞಾನ ನೀಡಿದರೆ ವೇಶ್ಯಾ ವಾಟಿಕೆಯಿಂದ ಜೀವನ ಸಾಗಿಸುತ್ತಿರುವ ಕುಟುಂಬಗಳಿಗೆ ಆಧಾಯ ಹೆಚ್ಚಿ ಸಮಾಜದ ಮುಖ್ಯವಾಹಿನಿಯಲ್ಲಿ ಗುರುತಿಸಿಕೊಳ್ಳುವರು ಎಂಬ ಉದ್ದೇಶದಿಂದ ಸ್ವತ: ತನ್ನ ಹಣದಲ್ಲಿ ಮಕ್ಕಳಿಗೆ ಬೇಕಾದ ಚಿತ್ರಕಲೆಯ ಸಾಮಗ್ರಿಗಳನ್ನು ಪೂರೈಸುತ್ತಾನೆ. ತನ್ನ ಕಾರ್ಯಕ್ಕೆ ಯಾರಲ್ಲಿಯೂ ಕೂಡಾ ಸಹಾಯ ಬೇಡಿ ಪಡೆದವನಲ್ಲ. ಕೆಲವು ದಿನಗಳು ಕಳೆದ ಮೇಲೆ ಚಿತ್ರಕಲೆಯಲ್ಲಿ ಮಕ್ಕಳು ಆಸಕ್ತಿ ತೋರಿ ಗೋಡೆಗಳ ಮೇಲೆ, ರಸ್ತೆಯ ಪಕ್ಕ ಚಿತ್ರ ಬರೆದು ಅಲ್ಪ ಸ್ವಲ್ಪ ಸಂಪಾದನೆ ಮಾಡಲು ಪ್ರಾರಂಭಿಸುತ್ತಾರೆ.

ಈ ಬದಲಾವಣೆಯನ್ನು ಬಯಸಿದ್ದ ಕಾಕಾ ಅನಾರೋಗ್ಯದಿಂದ ಆಸ್ಪತ್ರೆಗೆ ದಾಖಲಾಗುತ್ತಾನೆ. ಮುಂಬೈನಲ್ಲಿರುವ ಸರಕಾರಿ ಆಸ್ಪತ್ರೆಯ ಗಾಳಿ, ಬೆಳಕಿಲ್ಲದ ಕೋಣೆಯಲ್ಲಿ ವಿಶ್ರಾಂತಿ ಪಡೆಯುತ್ತಿದ್ದಾಗ ದೂರದಿಂದ ಯಾರೋ ಕಾಕಾನನ್ನು ವಿಕ್ಷೀಸುವಂತೆ ಅನಿಸುತ್ತದೆ. ಅಲ್ಲಿಗೆ ಬಂದವರು ತಾನು ಹೇಳಿಕೊಟ್ಟ ಕಲೆಯಿಂದ ರೂಪಗೊಂಡ ಮಕ್ಕಳ ದಂಡು. ಮಕ್ಕಳಲ್ಲಾದ ಬದಲಾವಣೆಗಳು ಕಾಕಾನ ರೋಗಕ್ಕೆ ಔಷದ ರೂಪದಲ್ಲಿ ಚಿತ್ರಿತವಾಗಿವೆ.

ಈ ವರೆಗಿನ ಜಯಂತ ಕಾಯ್ಕಿಣಿಯವರ ಕಥೆಗಳು ವೈವಿಧ್ಯತೆಯಿಂದ ಕೂಡಿವೆ ಎಂಬುದಕ್ಕೆ ಸಾಕ್ಷಿಯಂತಿವೆ. ಕಥೆಗಳ ವಿಮರ್ಷಾತ್ಮಕ ನೋಟ, ಮನೋವಿಜ್ಞಾನಕ್ಕೆ ಸಂಬಂದಿಸಿದ ಕಥೆಗಳು ಹೆಚ್ಚು ಸ್ಥಾನವನ್ನು ಪಡೆದಿವೆ. ವ್ಯಕ್ತಿ ವಿಭಿನ್ನ ಸ್ತರಗಳ ಮೂಲ. ವ್ಯಕ್ತಿಯ ಸುತ್ತ ಸುಳಿಯುವ ಹತ್ತಾರು ಸಮಸ್ಯೆಗಳಿಗೆ ವ್ಯಕ್ತಿ ಮತ್ತು ಸಮಾಜವೇ ಕೇಂದ್ರಬಿಂದು. ಅವರ ಬರವಣಿಗೆ ತುಂಬ ಸರಳವಾಗಿದ್ದು ಜನಸಾಮಾನ್ಯರಿಗೆ ಅರ್ಥವಾಗುವ ಶೈಲಿಯಿಂದ ಕೂಡಿವೆ.

ವ್ಯಕ್ತಿಯನ್ನೇ ಒಂದು ಪಾತ್ರವಾಗಿಸಿ, ಪ್ರಚಲಿತ ಸಮಸ್ಯೆಯ ಅರಿವನ್ನುಂಟು ಮಾಡುವ ಅನೇಕ ಕಥೆಗಳು ಈ ಕಥಾ ಸಂಕಲನದಲ್ಲಿ ಮೂಡಿ ಬಂದಿವೆ. ಈ ಕಥೆಗಳೆಲ್ಲ ಬೇರೆ ರಾಜ್ಯಗಳಲ್ಲಿ ನಡೆಯುವುದರಿಂದ ತೀರ ಕಥೆಯ ಓಟ ಅಸಹಜವಾದ ಅಂತ್ಯವನ್ನು ಕಾಣುತ್ತವೆ. ಪ್ರಮೂಖ ವ್ಯಕ್ತಿಗಳ ಪಾತ್ರಗಳನ್ನು ಕೊನೆಗೊಳಿಸುವಲ್ಲಿ ಓದುಗರಿಗೆ ಗೊಂದಲವನ್ನುಂಟು ಮಾಡುತ್ತವೆ. ಕೊನೆಯವರೆಗೆ ಎಲ್ಲವನ್ನು ಸ್ಪಷ್ಟವಾಗಿ ಚಿತ್ರಿಸುವ ಕಥೆಗಾರರು ಅಂತ್ಯದಲ್ಲಿ ಗೊಂದಲವನ್ನು ಬಗೆಹರಿಸುವ ಗೋಜಿಗೆ ಹೊದಂತಿಲ್ಲ. ನಾವು ಊಹಿಸಬಹುದಾದ ಅಂಶ ಎಂದರೆ ಸಿನಿಮಾ ಕ್ಷೇತ್ರದಿಂದ ಬಂದವರಾದ್ದರಿಂದ ಅದೆ ಕಥೆಯ ಮುಂದುವರೆದ ಭಾಗವನ್ನು ಬರೆಯುವ ಉದ್ದೇಶ ಇರಬಹುದೇ ಎಂಬುದು ಸಮಾಧಾನದ ಸಂಗತಿಯಾಗಿದೆ.

**ಪರಾಮರ್ಶನ ಗ್ರಂಥಗಳು**


1. ಬಣ್ಣದ ಕಾಲು, ಅಂಕಿತ ಪುಸ್ತಕ ಪ್ರಕಾಶನ, ಬೆಂಗಳೂರ, 2004
2. ಎಸ್ ಎಲ್ ಬೈರಪ್ಪ, ಕಾದಂಬರಿ ವಸ್ತು ಮತ್ತು ತಂತ್ರ, ಸ್ವಪ್ನ ಬುಕ್ ಹೌಸ್ ಬೆಂಗಳೂರು, 2008
3. ಡಾ ಗಿರಡ್ಡಿ ಗೋವಿಂದರಾಜು,ಸಮಗ್ರ ವಿಮರ್ಷೆ: ಕಥೆ ಮತ್ತು ಕಾದಂಬರಿ,
4. ಜಿ ಎಸ್ ಆಮೂರ, ಕಥನ ತಂತ್ರ,